(*b*) The U. A. S. is an autonomus body established under the Act passed by the State Legislature and Rules in K. C. S Rs. will not be automatically applicable to the U. A S.

(*c*) Government have already addressed the U. A S. to make suitable provision in its statutes in this regard,

## CALLING ATTENTION TO MATTERS OF URGENT PUBLIC IMPORTANCE

(*i*) *re*: *Reduction of Rates charged for eatables in hotels.*

SRI T. R. SHAMANNA (Fort).—Madam, I call the attention of the Honble Minister for Food and Civil Supplies to an urgent matter of public importance regarding the rates charged for eatables in hotels.

SMT. E. E. VAZ (Minister for Food and Civil Supplies).—Madam, in response to the Calling Attention Notice of the Hon'ble Member Sri Shamanna, I wish to make the following statement :—

Soon after the introduction of the emergency and after an assessement of the falling trend in prices, the Food and Civil Supplies Department has been continuously watching the level of prices in hotels, restaurants and other eating houses. In July 1975, certain reductions were effected by such establishments after discussions with Government in this department and again, from the 1st of March, 1976, certain further reductions were made. In effecting these reductions the view has been that the hoteliers and restaurant owners should voluntarily effect such cuts and, if possible, statutory regulations in this filed should be avoided.

Recently, as part of the general implementation of policies for the benefit of the common man, certain reductions have been annouced on the basis of available data in the case of hotels in Bangalore by the Minister of State for Labour and I am happy to notice that most of the hotels have agreed to reduce prices to the levels announced, subject to a detailed consideration of the entire matter. These reductions are effected as a voluntary measure without Government having to invoke statutory authority. Taking all circumstances into consideration, it is no doubt possible for hoteliers and restaurant owners to reduce prices.

We have, however, received a few representations that the prices of some of the items fixed do not work out economic from the point of view of some of the hoteliers. In fact as I have mentioned earlier, the prices wich have now been announced are tentative and their implementation is voluntary, I have already said that these prices are

subject to a detailed consideration of the entire matter When this matter is gone into in greater detail, the difficulties or other aspects of the problem which may be raised by the hoteliers will be taken into consideration. Based on a further examination of the entire matter, it is proposed to arrive at certain prices which I am sure will be accepted by the hoteliers and the owners of all restaurants and eating houses and which will also be appropriate from the point of view of the consumer. This process of examination of the problem in detail is being commenced and we hope to be able to finalise this matter in the next few days

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷರೆಯವರೇ, ಈಗ ಜನ ಸಾಮಾನ್ಯ ಉಪಯೋಗಿಸ ತಕ್ಕ ಹೋಟೆಲ್ ತಿಂಡಿಗಳ ಬೆಲೆ ಇಳಿಸಬೇಕು ಎನ್ನುವುದರಲ್ಲಿ ಯಾರದೂ ಅಭ್ಯಂತರವಿಲ್ಲ. ನನಗೆ ಕೆಲವು ಸಂದೇಹವೇನಂದರೆ, ಇಂತಹ ಅತಿ ಮುಖ್ಯವಾದಂಥ ತೀರ್ಮಾನವನ್ನು ತೆಗೆದುಕೊಳ್ಳುವಾಗ ಇದರ ಬಗ್ಗೆ ಸಾಕಾದಷ್ಟು ಪೂರಿತಿ ತೆಗೆದುಕೊಂಡಿದಿಯೇ? ಇದರ ಬಗ್ಗೆ ಯಾವುಯಾದರೂ ನಿಯಮ ಮತ್ತು ನಿಯಮಾವಳಿಗಳನ್ನು ಗೊತ್ತುಪಡಿಸಿದೆಯೇ? ತಿಂಡಿಗಳ ಬೆಲೆಯನ್ನು ಇಳಿಸಬೇಕು ಎಂದು ಹೇಳಿದರೆ ಇಳಿಸಬಹುದು. ಆದರೆ ಹೋಟಲುಗಳನ್ನು ನಡೆಸಕ್ಕ ಜನಗಳಿಗೆ ತೊಂದರೆಯಾಗುವುದಿಲ್ಲವೆ? ಮತ್ತು ಹೋಟಲುಗಳಲ್ಲಿ ತಿಂಡಿಗಳ ಬೆಲೆಗಳನ್ನು ಇಳಿಸಬೇಕು ಎನ್ನುವಾಗ ಅದರ ಗುಣಮಟ್ಟವನ್ನು ಕಡೆಗೆ ಗಮನಕೊಡಬೇಡವೆ? ಎಲ್ಲಾ ಹೋಟೆಲುಗಳನ್ನು ಒಂದೇ ತ್ರಾಟಗರಿಯಲ್ಲಿ ಹಾಕಿ ಪದಾರ್ಥಗಳ ಗುಣಮಟ್ಟ ಅನೇಕ ಸಂದರ್ಭಗಳಲ್ಲಿ ಕಡಿಮೆಯಾಗಿ ಉತ್ತಮವಾದ ಹೋಟೆಲುಗಳನ್ನು ಮುಚ್ಚುತಕ್ಕಂಥ ಸಂದರ್ಭ ಬರುವುದಿಲ್ಲವೇ ಇದನ್ನೆಲ್ಲಾ ಪರಿಶೀಲನೆಮಾಡಿ ಹೋಟೆಲ್‌ನವರು ಹೆಚ್ಚು ಲಾಭ ಮಾಡಕೂಡದು, ಜನಸಾಮಾನ್ಯರಿಗೂ ಹೆಚ್ಚು ಹೊರೆ ಬೀಳಬಾರದು—ಈ ರೀತಿಯಲ್ಲಿ ಒಂದು ಕ್ರಮವನ್ನು ಅನುಸರಿಸಬೇಕು. ಬರೀ ಪೇಪರ್ ಮುಖಾಂತರ ಹೇಳಿಕೆಕೊಟ್ಟು ಜನಗಳನ್ನು ಹೆದರಿಸತಕ್ಕಂಥಾದ್ದಲ್ಲ. ಅವರು ಡಿಪಾರ್ ಅಥವಾ ಮಿಸಾ ಪ್ರಕಾರ ರೆಗ್ಯುಲೇಷನ್ ಇಲ್ಲದೆ ಮಾಡುವುದಕ್ಕಾಗುತ್ತದೆಯೇ. ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಿದರೆ ಒಳ್ಳೆಯದು. ಹೋಟೆಲುಗಳನ್ನು ಕ್ಲಾಸಿಫಿಕೆಷನ್ ಮಾಡಬೇಕು. ಉತ್ತಮವಾದ ಹೋಟೆಲ್‌ನ್ನು ಒಂದು ಕ್ಯಾಟಗರಿ, ಮಧ್ಯಮ ದರ್ಜೆಯದು ಒಂದು ಕ್ಯಾಟಗರಿ ಮತ್ತು ತೀರ ಕೆಳಗಿನ ದರ್ಜೆಯ ಹೋಟೆಲ್‌ನ್ನು ಒಂದು ಕ್ಯಾಟಗರಿ ಎಂದು ಮಾಡಬೇಕು. ಹೊರಗಿನಿಂದ ಬರತಕ್ಕ ಜನರಿಗೆ ಸರಿಯಾದ ಗುಣಮಟ್ಟದಲ್ಲಿ ಊಟ, ತಿಂಡಿ—ನ್ಯಾಯಬೆಲೆಗೆ ಸಿಕ್ಕುವ ಹಾಗೆ ಕಾರ್ಯಕ್ರಮವ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಜನಸಾಮಾನ್ಯರಿಗೆ ತೊಂದರೆಯಾಗುವುದಿಲ್ಲವೇ? ಬೆಲೆಗಳು ಇಳಿಯಬೇಕು ಎನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಇಳಿಸುವುದರಲ್ಲಿ ಒಂದು ಕ್ರಮವನ್ನು ಅನುಸರಿಸಬೇಕು ಎನ್ನುವುದು ನನ್ನ ಮಾತು. ಅದರ ಬಗ್ಗೆ ವಿವರ ಕೊಟ್ಟರೆ ಒಳ್ಳೆಯದು.

ಶ್ರೀಮತಿ ಇ. ಇ. ವಾಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಮಣ್ಣನವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ ಈ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡೇ ಸರ್ಕಾರ ಆಗಾಗ ಪದಾರ್ಥಗಳ ದರಪಟ್ಟಿಯನ್ನು ಇಳಿಸುತ್ತಾ ಇವೆ. ಈಗ ಆಹಾರ ಪದಾರ್ಥಗಳ ದರ ಅದಷ್ಟು ಇಳಿದಿರುವುದರಿಂದ ಹೋಟೆಲ್ ನವರು ಕೂಡ ಜಾಸ್ತಿಲಾಭವನ್ನು ಅಪೇಕ್ಷಿಸದೆ ಕಡಿಮೆ ದರದಲ್ಲಿ ತಿನಿಸುಗಳನ್ನು ಕೊಡಬೇಕು ಎಂದು ಹೇಳಿದೆ. ಫ್ಲೋಟಿಂಗ್ ಸಾಪುಲೇಷನ್‌ಗೆ ಅನುಕೂಲವಾಗುವಂತೆ ಪದಾರ್ಥಗಳ ಪ್ರಮಾಣ ಮತ್ತು ಅದರ ಗುಣಮಟ್ಟ ಸರಿಯಾಗಿರಬೇಕು, ಆ ರೀತಿಯಲ್ಲಿ ಒಂದು ದಾವನ್ನು ನಿಗದಿಮಾಡಿ ಜನರಿಗೆ ಕೊಡಬೇಕು ಎನ್ನುವುದು ನಮ್ಮ ಅಪೇಕ್ಷೆ. ಈಗ ಸರ್ಕಾರಿಂದ ಪತಿಯೊಂದು ವರ್ಕಿಂಗ್ ಗ್ರೂಪ್ ಎಂದು ಮಾಡಿ ಅವರು ಎಲ್ಲಾ ಅಂಶಗಳಿಗೆ ಗಮನ ಕೊಡುತ್ತಾರೆ. ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ಹೋಟೆಲುಗಳನ್ನು ಕ್ಲಾಸಿಫಿಕೇಷನ್ ಮಾಡಬೇಕು. ಈಗ ೫ ಸ್ಟಾರ್, ೪ ಸ್ಟಾರ್ ಹೋಟೆಲ್‌ಗಳಿವೆ ; ಅಶೋಕ ಹೋಟೆಲ್ ಇದೆ; ವೆಸ್ಟ್‌ಎಂಡ್ ಹೋಟೆಲ್ ಇದೆ, ಹೋಟೆಲ್ ಈಸ್ಟ್ ಎಂಡ್ ವೆಸ್ಟ್ ಇದೆ, ಈಗ ಹೊಸದಾಗಿ ಹೋಟೆಲ್ ನವೀನ್ ಆಗಿದೆ. ಇಂತಹ ೩—೪ ದೊಡ್ಡ ಹೋಟೆಲ್‌ಗಳನ್ನು ಬಿಟ್ಟರೆ ಸಾರ್ವಜನಿಕರಿಗೆ ಉಪಯೋಗವಾಗುವಂಥ ಹೋಟೆಲ್‌ಗಳನ್ನು ಕ್ಲಾಸಿಫಿಕೇಷನ್‌ಮಾಡಿ, ಅದರ ಟರ್ನ್‌ಓವರ್ ಮತ್ತು ಅವರು ಜನರಿಗೆ ಕೊಡುವಂಥ ಸೌಕರ್ಯಗಳು ಎಷ್ಟು ಇದನ್ನೆಲ್ಲಾ ತಿಳಿದುಕೊಂಡು, ಹಾಗೂ ಜನರಿಗೆ ಯಾವ ಪ್ರಮಾಣದಲ್ಲಿ, ಯಾವ ಗುಣ

ಮಟ್ಟದ್ದು ಕೊಡಬೇಕು ಎನ್ನುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ನಷ್ಟು ಬೆಲೆ ನಿಗದಿಮಾಡ ಬೇಕು ಎನ್ನುವ ತೀರ್ಮಾನ ತೆಗೆದುಕೊಳ್ಳಲು ಒಂದು ವರ್ಕಿಂಗ್ ಗ್ರೂಪ್ ಮಾಡಬೇಕು ಎಂದು ನಿರ್ಧಾರ ತೆಗೆದುಕೊಂಡಿದ್ದೇವೆ.

ಈ ಎಲ್ಲ ಪ್ರಶ್ನೆಗಳನ್ನು ಶ್ರೀಮಾನ್ ಶಾಮಣ್ಣನವರು ಹಾಕಿದ್ದಾರೆ. ಈಗ ಹಂತ ಹಂತವಾಗಿ ಕ್ರಮ ತೆಗೆದುಕೊಂಡು ಅದಕ್ಕೆ ಕಮಿಟಿ ಮಾಡಿದಮೇಲೆ, ಆ ಕಮಿಟಿಯವರು ಪರಿಶೀಲನೆ ಮಾಡಿದಮೇಲೆ ಸೂಕ್ತ ಕ್ರಮ ತಗೆದುಕೊಳ್ಳುತ್ತೇವೆ, ಆಗ ಅವರ ಪ್ರಶ್ನೆಗೆ ತಕ್ಕ ಉತ್ತರ ಸಿಕ್ಕುತ್ತದೆ.

1-30 P. M.

ಶ್ರೀ ಸಿ. ಬೈರೇಗೌಡ —ಮಾನ್ಯ ಅಧ್ಯಕ್ಷರೇ ಈ ವಿಷಯದಲ್ಲಿ ಸರ್ಕಾರ ಅಲಸ್ಯ ಮನೋಭಾವನೆ ತಾಳಿದರೆ ನನಗೆ ಸಿಟ್ಟು ಬರುತ್ತದೆ ತರಕಾರಿ ಬೆಳೆದಂಥ ರೈತನಿಗೆ ಹೊಟ್ಟೆ ಉರಿಯುತ್ತಿದೆ, ೫ಕೆ ಜಿ ಟೊಮ್ಯಾಟೊ ೧ ರೂಪಾಯೀಗೆ ಮಾರಾಟವಾಗುತ್ತಿದೆ. ರಾಗಿ, ಭತ್ತ ೧೦೦ ರೂಪಾಯಿಗೂ ಕೇಳುವವರಿಲ್ಲ. ಅಲೂಗಡ್ಡೆ ಕೇಳುವವರಿಲ್ಲ. ಈರುಳ್ಳಿ ೨೮ ರೂಪಾಯಿಗೆ ೧ ಕ್ವಿಂಟಾಲ್ ಬರುತ್ತಿದೆ ಇಷ್ಟೆಲ್ಲಾ ಆಹಾರ ಪದಾರ್ಥಗಳ ಬೆಲೆಗಳು ಕಡಿಮೆ ಇದ್ದರೂ ಸಹ ಹೊರಗಡೆಯಿಂದ ಬರತಕ್ಕ ಜನತೆಯ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಹೋಟೆಲ್‌ನವರು. ಅವರು ಹೇಳಿದ್ದೇ ರೇಟಾಗಿದೆ. ಮೂರು ಬಾಸುಂಡಿ ೭ ರೂಪಾಯಿ ೫೦ ನಯಾಪೈಸೆ. ಯಾರಪ್ಪನ ಮನೆ ಗಂಟು ? ೬ ಪಡೆ ೨ ರೂಪಾಯಿ ೪೦ ಪೈಸೆ. ಅವರಿಷ್ಟಬಂದಹಾಗೆ ರೇಟ್ ಹಾಕಿಕೊಂಡು ಜನತೆಯ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ,

ಅಧ್ಯಕ್ಷರು.—ಬಾಸುಂಡಿಗೆ ಹಾಲು, ಸಕ್ಕರೆಯಂಥ್ನು ತಾವು ಒದಗಿಸಿದ್ದೀರಾ ?

ಶ್ರೀ ಸಿ. ಬೈರೇಗೌಡ —ಹಳ್ಳಿಯಿಂದ ಹಾಲು ಬರುತ್ತದೆ. ಸಕ್ಕರೆ ಕಂಟ್ರೋಲ್ ಮಾಡಿದ್ದಾರೆ. ಉದ್ದಿನ ವಡೆ ೪೦ ಪೈಸೆ. ಯಾತಕ್ಕೆ ಈ ರೀತಿಯಾದ ಅಲಸ್ಯ ಮನೋಭಾವನೆ ತೋರುತ್ತಿರುವುದು ? ನನಗಂತೂ ಅರ್ಥವಾಗುವುದಿಲ್ಲ. ೧೦೦ ರೂಪಾಯಿಗೆ ಮಾರಾಟವಾಗುತ್ತಿದ್ದ ಸುರಿ ಈಗ ೪೦ ರೂಪಾಯಿ ಆಗಿದೆ. ಹಂದಿ, ಕೋಳಿ ಕೇಳುವವರಿಲ್ಲ. ಒಂದು ಚಿಕ್ಕನ್ ಮಸಾಲೆ ೭ ರೂಪಾಯಿ ೮ ರೂಪಾಯಿ, ಜನ ಅದನ್ನು ಮುಟ್ಟಲೇಬಾರದೆ ? ಈಗ ನಮ್ಮಂಥವರು ಬೆಂಗಳೂರಿಗೆ ಬರುತ್ತೇವೆ, ನಾವು ಎಲ್ಲಿಗೆ ಹೋಗೋಣ ? ಅವರು ಹಾಕಿದ್ದೇ ರೇಟು. ಹೇಳುವವರಿಲ್ಲ, ಕೇಳುವವರಿಲ್ಲ, ನಿನ್ನೆ ದಿವಸ ಮಾನ್ಯ ಮಂತ್ರಿಗಳು ಹೇಳಿದರು ರೈತರಿಗೆ ಬೇಕಾದಂಥ ಪದಾರ್ಥಗಳ ಬೆಲೆ ೧೦ ರೂಪಾಯಿ ಓಪನ್ ಮಾರ್ಕೆಟ್ಟಿನಲ್ಲಿ ಇಳಿಸಿದ್ದೇವೆ ಎಂದು ಆಗ ಯಾರನ್ನೂ ಕೇಳಲಿಲ್ಲ. ಈಗ ಹೋಟೆಲ್‌ನವರ ಹತ್ತಿರ ಸಂಧಾನ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಬೈರೇಗೌಡರೇನು ಜಗಳ ಮಾಡುತ್ತೀರೋ, ಸೈಪ್ಟೀಕರಣ ಕೇಳುತ್ತಾರೋ, ವಾದ ಮಾಡುತ್ತೀರೋ, ಭಾಷಣ ಮಾಡುತ್ತಿರೋ ?

ಶ್ರೀ ಸಿ. ಬೈರೇಗೌಡ.—ಸರ್ಕಾರದ ಅಲಸ್ಯಮನೋಭಾವನೆ ನೋಡಿದರೆ ಹೊಟ್ಟೆ ಉರಿಯಂತ್ತದೆ.

ಶ್ರೀಮತಿ ಇ. ಇ. ವಾಜ್.—ಮಾನ್ಯ ಅಧ್ಯಕ್ಷರೆ, ಬೈರೇಗೌಡರು ಬಾಸುಂಡಿ ವಿಷಯ ಹೇಳಿದರು. ಅದಕ್ಕೆ ಅಲೂಗಡ್ಡೆ ಕೂಡ ಹಾಕುವುದಿಲ್ಲ ಎಂದು ಕಾಣುತ್ತದೆ. ಈಗ ಸಾಮಿನಾರು ತಿಂಡಿಗಳೆಂದಿರುತ್ತೆ. ನಾವು ಎಲ್ಲರಲ್ಲರ ಮೇಲೂ ಗಮನ ಇಡುವುದಕ್ಕೆ ಸಾಧ್ಯವಿಲ್ಲ. ಪಡೆ ಬಜ್ಜಿ, ಬಾದಾಮಿ ಹಾಲ್, ಉಪ್ಪಿಟ್ಟು, ಇಡ್ಲಿ, ಇವುಗಳನ್ನು ಮೊದಲು ತಿನ್ನೋಣ. ಮೊದಲು ಅಕ್ಕಿಯಿಂದ ಮಾಡಿದ ಆಹಾರ ಪದಾರ್ಥಗಳನ್ನು ತಿನ್ನೋಣ. ಹಣ ಇದ್ದವರು ಬಾಸುಂಡಿ ತಿನ್ನಲಿ. ಈ ತಿಂಡಿಗಳ ಬೆಲೆಯನ್ನು ನಿಗದಿ ಮಾಡುತ್ತಿದ್ದೇವೆ. ಸಿಹಿ ತಿಂಡಿಗಳನ್ನು ಬೇಕಾದರೆ ಮೂರು ಬಗೆಯದನ್ನು ಸೇರಿಸಬಹುದು ಎಲ್ಲ ತಿಂಡಿಗಳಿಗೂ ನಿಗದಿ ಮಾಡಲು ವುದಕ್ಕೆ ಸಾಧ್ಯವಿಲ್ಲ. ಹೋಟೆಲ್‌ನವರಿಗೆ ಕಂಟ್ರೋಲ್ ರೇಟಿನಲ್ಲಿ ಸಕ್ಕರೆ ಕೊಡುವುದಿಲ್ಲ. ಅವರು ಓಪನ್ ಮಾರ್ಕೆಟ್ಟಿನಲ್ಲಿ ತೆಗೆದುಕೊಳ್ಳಬೇಕು. ತಿಂಡಿ ಬೆಲೆಗಳನ್ನೂ ಸ್ವಲ್ಪಮಟ್ಟಿಗೆ ಕಡಿಮೆ ಮಾಡಬೇಕೆಂದು ಒತ್ತಾಯ ತರುತ್ತಿದ್ದೇವೆ ಈ ಬಗ್ಗೆ ತೀವ್ರವಾಗಿ ಗಮನ ಕೊಡುತ್ತಿದ್ದೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಹೋಟೆಲುಗಳ ವಿಚಾರದಲ್ಲಿ ಹೇಳುವುದಾದರೆ, ಆಹಾರಧಾನ್ಯಗಳ ಬೆಲೆ ಇಳಿದರೂ ಹೋಟೆಲು ತಿಂಡಿಗಳ ಬೆಲೆ ಇಳಿಯಲಿಲ್ಲ ಎಂಬ ಕೂಗು ಮೊದಲಿನಿಂದ ಇದೇ ಇದೆ. ಯಾತಕ್ಕೆ ಬೆಲೆಗಳು ಇಳಿಯಲಿಲ್ಲ ಎಂಬುದಕ್ಕೆ ಕಾರಣಗಳೇನು ಎಂದು ವಿಶ್ಲೇಷಣೆ ಮಾಡಿದರೆ

ನನಗನ್ನಿಸುತ್ತದೆ, ಅವರು ಒಂದು ಸಾರಿ ಯಾವುದೋ ಒಂದು ಪ್ರಮಾಣದಲ್ಲಿ ಲಾಭಗಳಿಕೆ ಮಾಡುವಂಥ ರಂಚಿಯನ್ನು ಕಂಡಮೇಲೆ ಅದನ್ನು ತಕ್ಷಣ ಕೈಬಿಡುವುದಕ್ಕೆ ಇಷ್ಟಪಡುವುದಿಲ್ಲ. ಆ ಸಮಯದಲ್ಲಿ ಒತ್ತಾಯ ತರಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ಸರ್ಕಾರ ಈ ಸಮಯದಲ್ಲಿ ಮಧ್ಯೆ ಪ್ರವೇಶಿಸಿ ಬೆಲೆಗಳನ್ನು ಇಳಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೋ ಅದನ್ನು ಹಾಕಿಕೊಳ್ಳಬೇಕಾಗುತ್ತದೆ. ಬೆಲೆ ಇಳಿಯುತ್ತದೆ ಎಂಬ ಸುದ್ದಿ ಹರಡಿದಕೂಡಲೇ ಹೋಟೆಲುಗಳಲ್ಲಿ ಕೊಡತಕ್ಕ ತಿಂಡಿಯ ರಂಚಿ ರೂಪ. ಆಕಾರ ಎಲ್ಲವೂ ಬನಲಾವಣೆ ಆಗಿದೆ. ಬೆಲೆಗಳ ಜೊತೆಯಲ್ಲಿ ಇದೂ ಕೂಡ ಇಳಿದಿದೆ. ಹಾಗಾದರೆ ಪ್ರಯೋಜನವಿಲ್ಲ ಗುಣಮಟ್ಟ ಕೂಡ ಕಾಪಾಡಿಕೊಂಡು, ರುಚಿ ರುಚಿ ಎಲ್ಲದಕ್ಕೂ ಕೂಡ ಗಮನಕೊಟ್ಟು ಬೆಲೆಗಳನ್ನು ಇಳಿಸಬೇಕಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ ಈ ಕೆಲಸ ಬಹಳ ನಿಧಾನವಾಯಿತು. ಜನವರಿ ತಿಂಗಳಿನಿಂದ ಕೆಲವು ಹೋಟೆಲುಗಳಲ್ಲಿ ಸ್ವಯಂಪ್ರೇರಿತರಾಗಿ ಇಳಿಸಿದ್ದಾರೆ ಎಂದು ಹೇಳಿಕೆ ಕೊಟ್ಟಿದ್ದೀರಿ. ಯಾವ ಹೋಟೆಲ್‌ನಲ್ಲಿ ಇಳಿಸಿದ್ದಾರೆ ? ನಮಗೆ ಗೊತ್ತಿಲ್ಲದೇ ಇರುವ ವಿಚಾರ ಅವರಿಗೆ ಹೇಗೆ ಗೊತ್ತಾಯಿತು ? ನಾನೊಬ್ಬ ೧೫ ರೂಪಾಯಿನ ತಿಂಡಿ ತಿನ್ನುತ್ತೇನೆ. ಅಂದರೆ ಅಷ್ಟೊಂದು ದುಬಾರಿ ಬೆಲೆ ಎಂದು ನಾನು ಹೇಳುತ್ತಿರುವುದು ನಿಮ್ಮ ನೇತೃತ್ವದಲ್ಲಿ ನಡೆಯುತ್ತಿರುವ ಹೋಟೆಲ್ (ಅಸೆಂಬ್ಲಿ ಲಾಂಜ್‌ನಲ್ಲಿರುವುದು) ಕಾಫಿ ೫೫ ಪೈಸೆ ಇದೆ.

ಅನ್ಯಕ್ಷರ.—ಅಲ್ಲಿ ತಿನ್ನಲೇಬೇಡಿ ಬಿಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸಾರ್ವಜನಿಕ ಜೀವನ ಜಟಿಲವಾಗಿದೆ. ಅಶೋಕ ಹೋಟಲ್‌ನಲ್ಲಿ...

ಅಧ್ಯಕ್ಷರು.—ಅಶೋಕ ಹೋಟೆಲ್‌ಗೆ ಎಲ್ಲರೂ ಹೋಗುವುದಿಲ್ಲ. ಒಂದು ದೋಸೆಗೆ ಐದು ರೂಪಾಯಿ ಕೊಡುವುದಕ್ಕೆ ಯಾರು ತಯಾರಿದ್ದಾರೆ ಅವರು ಹೋಗುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಸಾರ್ವಜನಿಕರು ಹೋಟೆಲನ್ನು ಅವಲಂಬಿಸಿದ್ದಾರೆ. ಸರ್ಕಾರ ಕ್ರಮ ತೆಗೆದುಕೊಳ್ಳುವುದು ನಿಧಾನವಾಗಿದೆ. ಇದಕ್ಕೆ ಒಂದು ಕಾಲವನ್ನು ಗೊತ್ತು ಮಾಡಿ. ನೀವು ಇದಕ್ಕೆ ಶಾಸನ ಮಾಡಿದರೂ ನಾವು ಸ್ವಾಗತಿಸತಕ್ಕವರು. ಹೋಟೆಲುಗಳನ್ನು ರಾಷ್ಟ್ರೀಕರಣ ಮಾಡಿದರೂ ಸರಿ ಒಪ್ಪಿಕೊಳ್ಳುತ್ತೇವೆ. ನೀವು ರಾಷ್ಟ್ರೀಕರಣ ಮಾಡಿ ನಡೆಸಲಾಗಲಿ ಎಂಬುದೂ ಗೊತ್ತಿದೆ. ಆದ್ದರಿಂದ ಅದಕ್ಕೆ ಕೈಹಾಕಬೇಡಿ, ಹೋಟೆಲುಗಳನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಯಾವಾಗ ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸಿ. ಹಾಗೂ ಅದಕ್ಕೆ ಏನು ರೀತಿನೀತಿ ಮಾಡಿದ್ದೀರಿ ಎಂಬುದನ್ನೂ ದಯವಿಟ್ಟು ತಿಳಿಸಿ.

ಶ್ರೀಮತಿ ಇ ಇ. ವಾಜ್. ಮಾನ್ಯ ಅಧ್ಯಕ್ಷರೆ, ಈಗಾಗಲೇ ಉತ್ತರ ಕೊಟ್ಟಿದೆ. ಅಧಿಕಾರವರ್ಗದವರನ್ನು ಮತ್ತು ಇತರರನ್ನು ಸೇರಿಸಿ ವರ್ಕಿಂಗ್ ಗ್ರೂಪ್ ಎಂದು ಮಾಡಿ ತಿಂಡಿಯ ಪ್ರಮಾಣ ಎಷ್ಟಿರಬೇಕು, ಗುಣಮಟ್ಟ ಹೇಗಿರಬೇಕು, ಯಾವರೀತಿ ದರನಿರಬೇಕು, ಎಲ್ಲವನ್ನೂ ಮಾಡಬೇಕೆಂದಿದ್ದೇವೆ. ಎಲ್ಲ ತಿಂಡಿಗಳ ಬೆಲೆಗಳನ್ನೂ ನಿಗದಿ ಮಾಡುವುದಕ್ಕಾಗುವುದಿಲ್ಲ ಮುಖ್ಯವಾಗಿ ಎಲ್ಲರಿಗೂ ಬೇಕಾಗುವಂಥ ತಿಂಡಿಗಳ ಮೇಲೆ ಹತೋಟಿ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಚೆನ್ನಾಗಿ ಮಾಡುತ್ತಾರೆ ಎಂದು ಹೇಳಿ ಕೆಲವು ಹೋಟೆಲುಗಳ ವರದಿ ನನ್ನ ಹತ್ತಿರ ಇವೆ. ಕಾಮತ್ ಗ್ರೂಪ್ ಆಫ್ ಹೋಟೆಲ್ಸ್ ಎಂದು ಸಿಟಿ ಮಾರ್ಕೆಟ್ ಹತ್ತಿರ ಇದೆ. ಜಿ.ಸಿ. ರೋಡಿನಲ್ಲಿ ಎರಡು ಮೂರು ಕಡೆ ಇದೆ ಶೇಷ ದ್ರಿ ಪುರಂನಲ್ಲಿ, ನರಸಿಂಹರಾಜಾ ರಸ್ತೆಯಲ್ಲಿ ಕೇವು ಇವೆ. ಮಸಾಲೆ ದೋಸೆ ೯೦ ಪೈಸೆ ಇದ್ದುದನ್ನು ೭೦ ಪೈಸೆಗೆ ಇಳಿಸಿ ಮತ್ತೆ ೧—೩—೭೬ರಿಂದ ೬೦ ಪೈಸೆಗೆ ಇಳಿಸಿದ್ದಾರೆ. ಇಡ್ಲಿ ೩೦ ಪೈಸೆಯಿಂದ ೨೫ ಪೈಸೆಗೆ ಇಳಿಸಿ ನಂತರ ೨೦ ಪೈಸೆಗೆ ಇಳಿಸಿದ್ದಾರೆ. ಖಾರಾಬಾತ್ ೫೦ ಪೈಸೆಯಿಂದ ೪೦ಕ್ಕೆ ಇಳಿಸಿ ಇನ್ನೂ ೫ ಪೈಸೆ ಇಳಿಸುತ್ತೇವೆಂದು ಹೇಳಿದ್ದಾರೆ. ಹೀಗೆ ಪ್ರತಿಯೊಂದು ಹೋಟೆಲ್‌ನಲ್ಲಿ ಮುಖ್ಯವಾಗಿ ಬೇಕಾದ ತಿಂಡಿಗಳೇನಿವೆ ಅದರ ಬೆಲೆಯನ್ನು ಎರಡು ಸಲ ಇಳಿಸಿದ್ದಾರೆ. ಅವರ ಮೇಲೆ ಒತ್ತಾಯ ಮಾಡಿ ಇನ್ನೂ ಬೆಲೆಗಳನ್ನು ಇಳಿಸಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರಿ ಕೋಣಂದೂರು ಲಿಂಗಪ್ಪ.— ಮಾನ್ಯ ಸಚಿವರು ಕಾಮತ್ ಹೋಟೆಲಿನ ಜಾಹಿರಾತು ಮಾಡಿದರು ನಿಜ, ಬೆಲೆ ಇಳಿಸಿದ್ದಾರೆ, ಆದರೆ ಅದರ ತೂಕ ಕೂಡ ಇಳಿದಿದೆ ಎಂಬುದು ಅವರ ಗಮನಕ್ಕೆ ಬಂದಿದೆಯೇ ? ಇನ್ನು ಅದನ್ನು ನೋಡುತ್ತೇನೆ ಮಾಡುತ್ತೇನೆ ಎಂದು ಹೇಳುತ್ತಾ, ತಕ್ಷಣ ರೇಟನ್ನು ನಿಗದಿ ಮಾಡದೆ ಇರುವುದನ್ನು ನೋಡಿದರೆ, ಹೋಟೆಲು ಮಾಲೀಕರುಗಳ ಮಂತ್ರಿಗಳಿಗೆ ಸರಿಯಾಗಿ ಪೇಜಾವಣಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂಬ ವಿಚಾರ ಸತ್ಯ

ವೆನಿಸುತ್ತದೆ. ಅದಕ್ಕೆ ಈಗಾಗಲೇ ಒಂದು ಲಕ್ಷ ರೂಪಾಯಿಗಳನ್ನು ಕರೆಕ್ಟ್ ಮಾಡಿದ್ದಾರೆ. ಏಕೆಂದರೆ ಬಡವರಿಗೆ ಬೇಕಾದ ತಿಂಡಿ ತೀರ್ಥಗಳ ಬೆಲೆಯನ್ನು ಇಳಿಸುವುದಕ್ಕೆ ಮಾನ್ಯ ಶ್ರೀರಾಮುಲು ಏನು ಪ್ರಯತ್ನ ಮಾಡಿದ್ದಾರೋ ಅದಕ್ಕೆ ಹೋಟೆಲ್‌ಲು ಮಾಲೀಕರ ಸಂಘದವರು ಕೂಡಲೇ ಏಟು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಅದಕ್ಕೆ ತಾವು ಮಣಿದು ವಿಳಂಬ ಮಾಡುತ್ತಿದ್ದೀರಾ ಹೇಗೆ? ಈಗ ಅಶೋಕ ಹೋಟೆಲು ಮತ್ತು ಫೈವ್ ಸ್ಟಾರ್ ಹೋಟೆಲುಗಳ ಬಗ್ಗೆ ಹೇಳಿದರು. ಅಶೋಕ ಹೋಟೆಲನ್ನು ನೋಡಿದರೆ ತಾವು ಎಂತಹ ಸಮಾಜವಾದಿಗಳು ಎಂಬುದು ಅರ್ಥವಾಗುತ್ತದೆ. ಅಲ್ಲಿನ ಬೆಲೆಗಳನ್ನು ಇಳಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಅನಿವಾಳದ ನಂಜಪ್ಪ.—ಮಾನ್ಯ ಅಧ್ಯಕ್ಷರೇ, ಸಾರ್ವಜನಿಕ ಕ್ಷೇತ್ರದಲ್ಲಿ ಹೋಟೆಲ್ ಉದ್ಯಮ ಬಹಳ ಪ್ರಮುಖವಾದ ಸ್ಥಾನವನ್ನು ಪಡೆದಿದೆ. ಎಲ್ಲಾ ಉದ್ಯಮಗಳಿಗಿಂತಲೂ ಹೆಚ್ಚಿನ ಲಾಭವನ್ನು ಸಾರ್ವಜನಿಕರಿಂದ ಗಳಿಸಿ ಅತಿ ಜಾಗ್ರತೆ ಶ್ರೀಮಂತರಾಗತಕ್ಕ ಉದ್ಯಮ ಇದು. ಇಂಥ ಉದ್ಯಮದ ಮೇಲೆ ಸರ್ಕಾರದವರು ಹಣಕಾಸಿನ ದೃಷ್ಟಿಯಿಂದ ಮತ್ತು ಆರೋಗ್ಯದ ದೃಷ್ಟಿಯಿಂದ ಹತೋಟಿಯನ್ನಿಟ್ಟುಕೊಳ್ಳದಿದ್ದರೆ ಬಹಳ ನಷ್ಟವಾಗುತ್ತದೆ. ಅದರಲ್ಲಿಯೂ ಬೆಂಗಳೂರಿನಂತಹ ರಾಜಧಾನಿಗೆ ಗ್ರಾಮಾಂತರ ಪ್ರದೇಶಗಳಿಂದ ಪ್ರತಿದಿವಸ ಸಾರ್ವಜನಿಕರು ಬಂದು ಹೋಗುತ್ತಾರೆ. ಪ್ರತಿಯೊಬ್ಬರೂ ಕೂಡ ಹೋಟೆಲಿನ ಊಟ ಮತ್ತು ತಿಂಡಿಗಳನ್ನೇ ಅವಲಂಬಿಸಿರುತ್ತಾರೆ, ಅದಕ್ಕೆ ಹೆಚ್ಚು ಹತೋಟಿ ಇಟ್ಟುಕೊಂಡು ಬರೀ ಆಹಾರ ಪದಾರ್ಥಗಳ ಬೆಲೆಯನ್ನು ಇಳಿಸಿದ್ದಾರೆ. ನೀವು ಪ್ರಚಾರ ಮಾಡುವ ಮುಖಾಂತರ ಜೀಪ್ ಆಗಿ ಗೆಯಿನ್ ಮಾಡುವುದಕ್ಕೆ ಸರ್ಕಾರದ ಹತೋಟಿ ಇದೆಯೆಂದು ಭಾಸವಾಗುತ್ತದೆ. ಇದು ಒಳ್ಳೆಯದಲ್ಲ. ಈಗ ಧಾರಣೆ ಇಳಿದಿರುವುದರಿಂದ ಏನು ಪ್ರಚಾರವಾಗುತ್ತದೆ. ಹೋಟೆಲಿಗೆ ಹೋಗಿ ಅಲ್ಲಿನ ಆಹಾರ ಪದಾರ್ಥಗಳನ್ನು ಉಪಯೋಗಿಸಿ ನೋಡಿದರೆ, ಅದರ ಗಾತ್ರ ಕಡಿಮೆಯಾಗಿರುವುದು, ಗುಣಮಟ್ಟ ಕಡಿಮೆಯಾಗಿರುವುದು, ಆರೋಗ್ಯಕ್ಕೆ ಬೇಕಾದ ವನ್ನುಗಳಿಲ್ಲದಿರುವುದು ಗೊತ್ತಾಗುತ್ತದೆ. ಕಂಟಿನ್ಯೂಯಸ್ ಆಗಿ ಒಂದು ವಾರ ಹೋಟೆಲಿನಲ್ಲಿ ಊಟ ತಿಂಡಿ ಮಾಡಿದರೆ 50 ಪರ್ಸೆಂಟ್ ಆರೋಗ್ಯ ಕೆಡುತ್ತದೆ. ಆ ದೃಷ್ಟಿಯಿಂದ ಸರ್ಕಾರದ ಹೊಣೆ ಇಲ್ಲವೇ? ಸಾರ್ವಜನಿಕರಿಗೆ ಆರೋಗ್ಯಕರವಾದ ಆಹಾರ ಪದಾರ್ಥಗಳನ್ನು ಒದಗಿಸುವುದು ಮತ್ತು ಗುಣಮಟ್ಟವನ್ನು ಮತ್ತು ಗಾತ್ರವನ್ನು ನಿರಪಡಿಸದೆ ಹೋದರೆ ಬಹಳ ಕೊಂದರೆಯಾಗುತ್ತದೆ. ಬೆಲೆಯನ್ನು ಕಡಿಮೆ ಮಾಡುವುದರ ಜೊತೆಗೆ ಗುಣಮಟ್ಟ ಮತ್ತು ಗಾತ್ರವನ್ನು ಸರಿಪಡಿಸಲು ಸಾಧ್ಯವಾಗದೆ ಹೋದರೆ ಕೊನೇಪಕ್ಷ ಹೋಟೆಲುಗಳನ್ನು ರಾಷ್ಟ್ರೀಕರಣ ಮಾಡಿ ಸಾರ್ವಜನಿಕರಿಗೆ ನಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಕೊಡಬಯಸುತ್ತೇನೆ.

ಶ್ರೀಮತಿ ಇ. ಇ. ವಾಜ್ —ಮಾನ್ಯ ಅಧ್ಯಕ್ಷರೇ, ಅನಿವಾಳದ ನಂಜಪ್ಪನವರು ಹೇಳಿದ ಒಂದು ಮಾತನ್ನು ಪೂರ್ತಿಯಾಗಿ ಒಪ್ಪುತ್ತೇನೆ. ಇದರ ಹತೋಟಿಯನ್ನಿಟ್ಟುಕೊಳ್ಳುವ ಜವಾಬ್ದಾರಿ ಹೊಣೆ ಸರ್ಕಾರದ ಮೇಲೆ ಇದೆ. ಆ ಬಗ್ಗೆ ಅವಶ್ಯ ಜಾಗ್ರತೆ ಕ್ರಮ ತಗೆದುಕೊಳ್ಳುತ್ತೇನೆಂದು ನಾನು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ನೀವು ಬೆಲೆ ಇಳಿಸಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಯಾವ ರೀತಿ ಇಳಿಸಿದ್ದೀರೆಂದರೆ ಕೆಲವು ಹೋಟೆಲುಗಳಲ್ಲಿ 4 ಜನ ಕುಳಿತುಕೊಳ್ಳುವುದಕ್ಕೆ ಜಾಗ ಇರುವದಿಲ್ಲ, ಗಾಳಿ ಬೆಳಕು ಸರಿಯಾಗಿರುವದಿಲ್ಲ, ಅರ್ಧಗಂಟೆ ಕುಳಿತುಕೊಂಡು ಒಂದು ಲೋಟ ನೀರು ಕೇಳಿದರೂ ಕೊಡುವುದಿಲ್ಲ.

*(ii) Re : Stoppage of Rural Electrification Works in the State due to in adequate supply of Wire.*

SRI H. T. KRISHNAPPA (Nelamangala).—I hereby call the aatention of the hontle Minister of State for Power to the inadequate supply of wire resulting in the stoppage of Rural Electrification Werk for the last foure to five months in the State.